# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 163 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ | Reply |
|---|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ 5 ವರ್ಷದ ಅವಧಿಯಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಸಣ್ಣ ಕೈಗಾರಿಕಾ ವಲಯಗಳನ್ನು ಪ್ರಾರಂಭಿಸಲಾಗಿದೆ; | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ 5 ವರ್ಷದ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಯಾವುದೇ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿರುವುದಿಲ್ಲ. | No Industrial Estates have been established by Karnataka State Small Industries Development Corporation Limited since last 5 years in Kolar and Chikkaballapur Districts. |
| ಆ) | ಈ ಕೈಗಾರಿಕೆಗಳನ್ನು ಸ್ಥಾಪಿಸಲು ಕೆ.ಎಸ್.ಎಸ್.ಐ.ಡಿ.ಸಿ. ಮೂಲಕ ಮಂಜೂರು ಮಾಡಲಾಗಿರುವ ನಿವೇಶನಗಳೆಷ್ಟು; ಇದರಲ್ಲಿ ಎಷ್ಟು ಕೈಗಾರಿಕೆಗಳು ಪ್ರಾರಂಭಗೊಂಡಿದೆ; ಎಷ್ಟು ಜನರಿಗೆ ಉದ್ಯೋಗ ದೊರಕಿದೆ; (ಪೂರ್ಣ ವಿವರ ನೀಡುವುದು) | ಮೇಲಿನ ಉತ್ತರದಿಂದಾಗಿ ಪ್ರಶ್ನೆ ಉದ್ಭವಿಸುವುದಿಲ್ಲ | Does not arise in view of above answer |

| | | | |
|---|---|---|---|
| ಇ) | ಬಹಳಷ್ಟು ಫಲಾನುಭವಿಗಳು ನಿವೇಶನ ಹಂಚಿಕೆಯಾಗಿ 10 ವರ್ಷಗಳು ಕಳೆದರೂ, ಇದುವರೆಗೂ ಯಾವುದೇ ಕೈಗಾರಿಕೆಗಳನ್ನು ಪ್ರಾರಂಭಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ | Yes |
| ಈ) | ಹಾಗಿದ್ದಲ್ಲಿ, ನಿವೇಶನಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಸರ್ಕಾರವು ಅನುಸರಿಸುತ್ತಿರುವ ನೀತಿ ನಿಯಮಗಳೇನು; ನಿರ್ದಿಷ್ಟ ಕಾಲಮಿತಿಯೊಳಗೆ ಕೈಗಾರಿಕೆಗಳನ್ನು ಪ್ರಾರಂಭಿಸದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; ಮತ್ತು ಇದುವರೆಗೂ ಎಷ್ಟು ನಿವೇಶನಗಳನ್ನು ನಿಗಮದ ವ್ಯಾಪ್ತಿಗೆ ವಾಪಸ್ಸು ಪಡೆಯಲಾಗಿದೆ; | • ನಿಗಮದ ಹಂಚಿಕೆ ನಿಯಮ ಹಾಗೂ ಕರಾರು ಒಪ್ಪಂದದಂತೆ, ಹಂಚಿಕೆದಾರರು, ತಮ್ಮ ನಿವೇಶನಗಳಲ್ಲಿ, 5 ವರ್ಷಗಳ ಒಳಗೆ ಕೈಗಾರಿಕಾ ಕಟ್ಟಡ ನಿರ್ಮಿಸಿ, ಕೈಗಾರಿಕೆ ಪ್ರಾರಂಭಿಸಬೇಕಾಗಿರುತ್ತದೆ. ಆದರೆ, ನಿಗದಿತ ಅವಧಿಯಲ್ಲಿ ಕೈಗಾರಿಕೆ ಕಾರ್ಯ ಚಟುವಟಿಕೆ ಪ್ರಾರಂಭಿಸದೇ ಇರುವ ನಿವೇಶನಗಳ ಹಂಚಿಕೆದಾರರಿಗೆ, ನಿಗಮದ ಮಂಡಳಿ ಸಭೆಯ ನಿರ್ಣಯದಂತೆ ನಿವೇಶನಗಳ ಹಂಚಿಕೆ ಪುನರ್ ಸ್ಥಾಪನೆ ದಂಡ ವಿಧಿಸಿ, ಕೈಗಾರಿಕಾ ಚಟುವಟಿಕೆ ಪ್ರಾರಂಭಿಸಲು ಹೆಚ್ಚಿನ ಕಾಲಾವಕಾಶ ನೀಡಲಾಗುತ್ತಿದೆ.<br>• ಇದುವರೆಗೂ 07 ನಿವೇಶನಗಳ ಹಂಚಿಕೆದಾರರು ನಿವೇಶನದ ಮೌಲ್ಯವನ್ನು ಪಾವತಿಸದೇ ಇರುವುದರಿಂದ, ನಿವೇಶನಗಳ ಹಂಚಿಕೆಗಳನ್ನು ರದ್ದುಪಡಿಸಿ, ನಿಗಮದ ವಶಕ್ಕೆ ಪಡೆಯಲಾಗಿದೆ. | • As per the terms and conditions of allotment and the conditions in the agreement, the allottees have to construct the industrial building and start the industry/activities within 5 years of allotment date. In case where the allottees have not constructed the building and commenced the activities in the plots allotted, the Corporation has introduced the scheme for restoration of allotment by imposing penalty and further time is granted to the allottees for starting the industry.<br>• As regards to Chikkaballapur and Kolar Districts, so far 07 allottees of the plots have not paid the full cost of the plots, hence, the allotments have been cancelled and plots have been resumed to the custody of the Corporation. |
| ಉ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೊಸದಾಗಿ ಕೈಗಾರಿಕಾ ವಲಯವನ್ನು ಸ್ಥಾಪಿಸಲು ಯಾವುದಾದರೂ ಸ್ಥಳವನ್ನು | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಕೋಲಾರ ಜಿಲ್ಲೆಯ ಕೆ.ಜಿ.ಎಫ್. ತಾಲ್ಲೂಕಿನ ರಾಬರ್ಟಸನ್ ಪೇಟೆ ಹೋಬಳಿ, ಬಂಗಾರದ ಗಣಿ ಗ್ರಾಮದ ಸರ್ವೆ ನಂಬರ್ 02 ರಲ್ಲಿ ನಿಗಮದಿಂದ ಕೈಗಾರಿಕಾ ವಸಾಹತು ಸ್ಥಾಪಿಸಲು 100 ಎಕರೆ ಜಮೀನು ಮಂಜೂರಾತಿ ಮಾಡಲು ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ರವರಿಗೆ | A proposal has been submitted to the Deputy Commissioner Kolar District on 29.05.2024 for sanction of 100 acres of government land in Survey No. 02 of Bangarada Gani Village, Robertsonpet Hobli, K.G.F Taluk, Kolar District, for setting up an industrial estate by the Corporation. |

| | | | |
|---|---|---|---|
| | ಗುರುತಿಸಲಾಗಿದೆಯೇ? (ಪೂರ್ಣ ವಿವರ ಒದಗಿಸುವುದು) | ದಿನಾಂಕ: 29.05.2024 ರಂದು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.<br><br>ಮುಂದುವರೆದು, ಚಿಕ್ಕಬಳ್ಳಾಪುರ ಜಿಲ್ಲೆಯ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಬಾಗೇಪಲ್ಲಿ ಹಾಗೂ ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ಹೊಸದಾಗಿ ಕೈಗಾರಿಕಾ ವಸಾಹತು ಸ್ಥಾಪಿಸಲು ಅನುಕೂಲವಾಗುವಂತೆ ಯೋಗ್ಯವಾದ 20 ರಿಂದ 50 ಎಕರೆ ಸರ್ಕಾರಿ ಜಮೀನು ಮಂಜೂರಾತಿಗಾಗಿ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರನ್ನು ಕೋರಲಾಗಿರುತ್ತದೆ. | Further, corporation has submitted a proposal to the Deputy Commissioner Chikkaballappur District for granting suitable 20 to 50 acres of government land to facilitate establishment of new industrial estate in Chikkaballapur, Chintamani, Gouribidanur, Bagepallj and Shidlaghatta taluks of Chikkaballapur district. |

ಸಿಐ 160 ಸಿಎಸ್‌ಸಿ 2024

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.